ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ಕರ್ನಾಟಕ ಕೃಷಿ ಇಲಾಖೆ

ಸಮಗ್ರ ಕೃಷಿ ಹವಾಮಾನ ವಿಭಾಗ

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು–೬೫

ತುರುವೇಕೆರೆ ಹೋಬಳಿಯ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: **19.08.2014**

ಈ ವಾರದ ಮುನ್ಸೂಚನೆ (ದಿನಾಂಕ **20-08-14 to 24.08.14** ವರೆಗೆ)

ನಿಯತಾಂಕಗಳು	20.08.14	21.08.14	22.08.14	23.08.14	24.08.14
ಮಳೆ (ಮಿ ಮಿ)	17	11	11	15	5
ಗರಿಷ್ಠ ಉಷ್ಣಾಂಶ(ಡಿ.ಸೆ.)	32	31	31	30	29
ಕನಿಷ್ಠ ಉಷ್ಣಾಂಶ (ಡಿ.ಸೆ.)	21	21	21	21	21
ಮೋಡ (ಪ್ರಮಾಣ)	6	7	6	7	7
ಆರ್ದ್ರತೆ ೭.೨೦ ಬೆ (ಶೇ)	83	83	82	83	84
ಆರ್ದ್ರತೆ ೨.೨೦ ಮ (ಶೇ)	64	67	59	61	65
ಗಾಳಿಯ ವೇಗ (ಕಿ.ಮಿ/ಗಂಟೆಗೆ)	5	6	6	4	5
ಗಾಳಿಯ ದಿಕ್ಕು (ಡಿಗ್ರಿ)	300	285	295	300	295

ಭಾರತೀಯ ಹವಾಮಾನ ಇಲಾಖೆಯ ಸಮೀಕ್ಷೆಯ ಪ್ರಕಾರ ಮುಂದಿನ ಐದು ದಿನಗಳಲ್ಲಿ ತುಮಕೂರು ಹಾಗೂ ಸುತ್ತಮುತ್ತ ಹಗುರವಾದ ಮಳೆಯ ಸಂಭವವಿದೆ. ದಿನದ ಗರಿಷ್ಠ ಉಷ್ಣಾಂಶ **29-32.0°C** ಮತ್ತು ಕನಿಷ್ಠ **21°C** ಇರುವ ಸಾಧ್ಯತೆ ಇದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ **82-84 %** ಇದ್ದು, ಮಧ್ಯಾಹ್ನ **59-67 %** ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **4-6** ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ✓ ಸಾಧಾರಣ ಮಳೆಯ ಸಂಭವವಿದ್ದು, ರೈತರು ಔಷಧಿ ಸಿಂಪಡಣೆಯನ್ನು ಮುಂದೂಡಬೇಕು.
- ✓ ಸಾಧಾರಣದಿಂದ ಜೋರು ಮಳೆಯ ಸಂಭವ ಇರುವುದರಿಂದ ರಾಸಾಯನಿಕ ಗೊಬ್ಬರವನ್ನು ಎರಚಬೇಡಿ. ಗೊಬ್ಬರವು ಚೆನ್ನಾಗಿ ಮಣ್ಣಲ್ಲಿ ಬೆರೆಯುವಂತೆ ನೋಡಿಕೊಳ್ಳಬೇಕು.
- ✓ ಹೊಲದಲ್ಲಿ ಬಸಿಗಾಲುವೆಗಳನ್ನು ನಿರ್ಮಿಸಿ ನೀರು ಹರಿದು ಹೋಗುವಂತೆ ನೋಡಿಕೊಳ್ಳಬೇಕು.
- ✓ ತೊಗರಿ, ರಾಗಿ, ಜೋಳ, ಮುಂತಾದ ಬೆಳೆಗಳಲ್ಲಿ ಅಂತರ ಬೇಸಾಯ ಮಾಡಿ ಕಳೆ ನಿಯಂತ್ರಣ ಮಾಡಬೇಕು.
- ✓ ಹೊಲದಲ್ಲಿ ವಿಶೇಷವಾಗಿ ತರಕಾರಿ/ಹೂ ಬೆಳೆಗಳಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳಬೇಕು.

ಈ ತಿಂಗಳಲ್ಲಿ ಬೆಳೆಯಬಹುದಾದ ಬೆಳೆಗಳು:

ಅಲಸಂದೆ: ಟಿ.ವಿ.ಎಕ್ಸ್–944, ಕೆ. ಬಿ.ಸಿ– 1, ಕೆ.ಎಮ್–5, ಪಿ.ಕೆ.ಬಿ– 4 (ತರಕಾರಿಗಾಗಿ) ಅವರೆ: ಹೆಚ್,ಎ.– 3, ಹೆಚ್,ಎ–4. ಹುರುಳಿ: ಕೆ.ಬಿ.ಹೆಚ್–1, ಪಿ.ಹೆಚ್.ಜಿ–9

ಸಸ್ಯ ಸಂರಕ್ಷಣೆ: ಥ್ರಿಪ್ಸ್/ಹೇನು/ಎಫಿಡ್ಸ್ ಹಾಗೂ ಇನ್ನಿತರೆ ರಸ ಹೀರುವ ಕೀಟಗಳು ಮಳೆ ಜೋರಾಗಿ ಬಂದರೆ ನೈಸರ್ಗಿಕವಾಗಿ ನಿಯಂತ್ರಣಕ್ಕೆ ಬರುತ್ತವೆ. ಆದ್ದರಿಂದ ಔಷಧಿ ಸಿಂಪಡಣೆಯನ್ನು ಮಾಡದಿರುವುದು ಉತ್ತಮ.

ಮಳೆ ಬಾರದೇ ಇದ್ದು, ಈ ಕೀಟಗಳ ಹಾವಳಿ ಜಾಸ್ತಿ ಇದ್ದರೆ ಆಕ್ಟ್ರ ಅಥವಾ ಇಮಿಡಾಕ್ಲೋಪ್ರಿಡ್ ಅನ್ನು (1ಗ್ರಾಂ/ಲೀ) ಅಥವಾ ಬೇವಿನ ಕಷಾಯ/ಎಣ್ಣೆಯನ್ನು ಸಿಂಪಡಣೆ ಮಾಡಬೇಕು.

ಸಹ ಸಂಶೋಧಕರು:
ಡಿ.ಶ್ರೀಧರ್

ನೋಡಲ್ ಅಧಿಕಾರಿ:
ಎನ್.ಎ.ಜನಾರ್ಧನಗೌಡ
ಬೆಂಗಳೂರು